ಮುಂತಾದವುಗಳಿಗೆ ಇರುತ್ತದೆ. ಹಳ್ಳಿಗಳ ವಿದ್ಯುತ್ ಬೇಡಿಕೆಯು ಹೆಚ್ಚಾಗಿ ನೀರಾವರಿ ಪಂಪುಸೆಟ್‌ಗಳು ಹಾಗೂ ಕಡಿಮೆ ಸಂಖ್ಯೆಯ ಸರ್ವೆ ವಿದ್ಯುತ್ ಗೃಹ ಮತ್ತು ಸಣ್ಣ ನೀರು ಸರಬರಾಜು ಸ್ಥಾವರ ಮುಂತಾದವು ಇರುತ್ತದೆ. ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ ವಿದ್ಯುತ್ ನಿಲುಗಡೆ ಒಂದೇ ರೀತಿ ಅನುಸರಿಸಿದ್ದೇ ಆದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ತುಂಬಾ ಕಂದಾಯ ನಷ್ಟವಾಗುವುದರ ಜೊತೆಗೆ ಕಾರ್ಖಾನೆಗಳ ಉತ್ಪಾದನೆ ಕುಂಠಿತವಾಗಿ ಜನಜೀವನಕ್ಕೆ ತೊಂದರೆಯಾಗುವ ಸಾಧ್ಯತೆಯಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪದನಾ ಸಾಮರ್ಥ್ಯಕ್ಕಿಂತ ವಿದ್ಯುತ್ ಬೇಡಿಕೆಯೇ ಜಾಸ್ತಿಯಾಗಿರುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ನಿಲುಗಡೆ ಮಾಡದಿದ್ದ ಪಕ್ಷದಲ್ಲಿ ಐ.ಪಿ. ಸೆಟ್‌ಗಳ ಅಧಿಕ ಹೊರೆಯಿಂದ ಇಡೀ ವಿದ್ಯುತ್ ವ್ಯವಸ್ಥೆಯೇ ಕುಸಿಯುವ ಸಂಭವವಿರುತ್ತದೆ. ಅದಾಗ್ಯೂ ಹೆಚ್ಚಿಗೆ ಪಟ್ಟಣದಲ್ಲಿಯೇ ಇರುವ ಹೆಚ್‌ಟಿ ಗ್ರಾಹಕರಿಗೆ ವಿದ್ಯುತ್ ಕಡಿತವನ್ನು ಹಾಕಲಾಗಿದ್ದು ಇದರ ಜೊತೆಗ ಪ್ರತಿದಿವಸ ಸಂಜೆ 6 ರಿಂದ 9ರವರೆಗೆ ವಿದ್ಯುತ್ ಉಪಯೋಗಿಸಿಕೂಡದೆಂದು ತಿಳಿಸಲಾಗಿರುತ್ತದೆ. ಹಳ್ಳಿಗಳಲ್ಲಿರುವ ಐ.ಪಿ.ಸೆಟ್‌ಗಳಿಗೆ ಮೇಲೆ ತಿಳಿಸಿರುವ ವಿದ್ಯುತ್ ಕಡಿತ ಅಥವಾ ಸಂಜೆ 6 ರಿಂದ 9 ರವರೆಗೆ ವಿದ್ಯುತ್ ಉಪಯೋಗಿಸದಂತೆ ನಿರ್ಬಂಧ ಹಾಕಿರುವುದಿಲ್ಲ.

ಆ) ಒಂದು ಕೋಟಿ ರೂ. ಗಿಂತಲೂ ಹೆಚ್ಚಿಗೆ ಬಾಕಿ ಇರುವ ಕೆಲವು ಸಂಸ್ಥೆಗಳು ಈ ಬಾಕಿಗೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಹೋಗಿ ಅವು ಇನ್ನೂ ನಿರ್ಧಾರವಾಗಿಲ್ಲ. ಈ ಕಾರ್ಖಾನೆಗಳು ಹೆಚ್ಚು ವಿದ್ಯುತ್ತನ್ನು ಬಳಸುತ್ತಿರುತ್ತವೆ ಮತ್ತು ಪ್ರತಿ ತಿಂಗಳ ಬಿಲ್ಲನ್ನು ಕಟ್ಟುತ್ತಿರುತ್ತವೆ. ಇವುಗಳಿಗೆ ವಿದ್ಯುತ್ತನ್ನು ನಿಲ್ಲಿಸಿದರೆ, ಉತ್ಪಾದನೆ ಕುಂಠಿತವಾಗುವುದರ ಜೊತೆಗೆ, ಮಂಡಳಿಯ ಕಂದಾಯಕ್ಕೆ ಧಕ್ಕೆಯುಂಟಾಗುತ್ತದೆ ಮತ್ತು ಕಾರ್ಮಿಕರ ಕಂದಾಯಕ್ಕೆ ಧಕ್ಕೆಯುಂಟಾಗುತ್ತದೆ. ಮತ್ತು ಕಾರ್ಮಿಕರ ಶಾಂತಿಗೆ ಭಂಗ ಬರುವ ಸಂಭವವಿರುತ್ತದೆ. ಅದಾಗ್ಯೂ ಈ ಬಾಕಿಯನ್ನು ವಸೂಲು ಮಾಡಲು ಕೆ.ಇ.ಬಿ.ಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ತುಂಗಭದ್ರಾ ಮಂಡಳಿ ರದ್ಧತಿ.

473 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) "ತುಂಗಭದ್ರಾ ಮಂಡಳಿ" ಸ್ಥಾಪನೆಯ ಉದ್ದೇಶವೇನಿತ್ತು?

ಆ) 1991-92ನೇ ಸಾಲಿಗೆ ತುಂಗಭದ್ರಾ ಮಂಡಳಿಗೆ ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು?

ಇ) ಇದನ್ನು ರದ್ದು ಮಾಡುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ತುಂಗಭದ್ರಾ ಯೋಜನೆಯಡಿಯಲ್ಲಿ ಆಂಧ್ರ ಪ್ರದೇಶ ಮತ್ತು ಕರ್ನಾಟಕ ಈ ಎರಡೂ ರಾಜ್ಯಗಳ ಪರಸ್ಪರ ಹಿತಾಸಕ್ತಿಗಳಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ತುಂಗಭದ್ರಾ ಮಂಡಳಿಯನ್ನು ರಚಿಸಲಾಗಿದೆ.

ಆ) ರೂ. 395.09 ಲಕ್ಷ.

ಇ) ಹೌದು.